# ತೂಕದ ನೆಲೆ

ಸಂಪಾದಕರು

ಡಾ. ಶಿವಲಿಂಗಪ್ಪ. ಆಯ್. ಭಂಡಾರಿ

ಡಾ. ತಿಪ್ಪೇಸ್ವಾಮಿ. ಡಿ. ಎಸ್



# ತೂಕದ ನೆಲೆ

## (ವಿಮರ್ಶಾ ಲೇಖನಗಳು)


**ಡಾ. ಶಿವಲಿಂಗಪ್ಪ ಆಯ್. ಭಂಡಾರಿ**

ಎಂ.ಎ.ಪಿಹೆಚ್.ಡಿ

**ಡಾ. ತಿಪ್ಪೇಸ್ವಾಮಿ ಡಿ. ಎಸ್.**

ಎಂ.ಎ.ಪಿಹೆಚ್.ಡಿ



ಪ್ರಕಾಶಕರು

**ಎಸ್.ಎಲ್.ಎನ್. ಪಬ್ಲಿಕೇಷನ್**

ನಂ. 3437, 4ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಶಾಸ್ತ್ರೀನಗರ

ಬನಶಂಕರಿ 2ನೇ ಹಂತ, ಬೆಂಗಳೂರು-29

ಮೊ : 9972129376

**umeshnagamangala@gmail.com**

**ತೂಕದ ನೆಲೆ** : ವಿಮರ್ಶಾ ಲೇಖನಗಳು

ಲೇಖಕರು : **ಡಾ. ತಿಪ್ಪೇಸ್ವಾಮಿ ಡಿ. ಎಸ್.**
ಹುನಗುಂದ, ಬಾಗಲಕೋಟೆ
ಡಾ. ಶಿವಲಿಂಗಪ್ಪ ಆಯ್. ಭಂಡಾರಿ
ಸಿಂಧಗಿ, ವಿಜಯಪುರ

**ಪ್ರಕಾಶಕರು** : **ಎಸ್.ಎಲ್.ಎನ್. ಪಬ್ಲಿಕೇಷನ್**
ನಂ. 3437, 4ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ,
ಶಾಸ್ತ್ರೀನಗರ, ಬನಶಂಕರಿ 2ನೇ ಹಂತ,
ಬೆಂಗಳೂರು–29. ಮೊ : 9972129376

**ISBN** : **978-81-948128-7-6**

ಪ್ರಥಮ ಮುದ್ರಣ : 2020

ಅಳತೆ : 1/8 ಡೆಮ್ಮಿ
ಕಾಗದದ ಬಳಕೆ : 70 ಜಿ.ಎಸ್.ಎಂ. ಮ್ಯಾಪ್ಲಿಥೋ

ಪುಟಗಳು : xii+296=308


ಹಕ್ಕುಗಳು : ಲೇಖಕರದ್ದು


ಪ್ರತಿಗಳು : 1000

ಬೆಲೆ : **ರೂ. 300–00**

ಮುಖಪುಟ ವಿನ್ಯಾಸ : ಕೆ.ಕೆ. ಮಕಾಳಿ. ಹಂಪೆ

ಅಕ್ಷರ ಜೋಡಣೆ : ಸಹನಾ ಗ್ರಾಫಿಕ್ಸ್, ಬೆಂಗಳೂರು. 9342196255

ಮುದ್ರಣ : ಓಂ ಶ್ರೀ ಪ್ರಿಂಟರ್ಸ್, ಕಸ್ತೂರಿ ಬಾ ನಗರ
ಬೆಂಗಳೂರು

# ಪರಿವಿಡಿ

ಮುನ್ನುಡಿ

ಲೇಖಕರ ಮಾತು

ಪ್ರಕಾಶಕರ ಮಾತು

1. ಚಾಮರಸನ ಪ್ರಭುಲಿಂಗಲೀಲೆ : ಒಂದು ಸಂಸ್ಕೃತಿಕ ಅಧ್ಯಯನ.
– **ಡಾ.ರಾಜಶೇಖರ ಬಸುಪಟ್ಟದ**

2. ಹಯವದನ : ಸಂಪ್ರದಾಯ ಮತ್ತು ಆಧುನಿಕತೆ
– **ಡಾ. ಶ್ರೀಶೈಲ ಆರ್. ಗೋಲಗೊಂಡ**

3. ಪಂಪನ ಪ್ರತಿನಾಯಕ ಕರ್ಣ
– **ಡಾ. ಮುರ್ತುಜಾ ಬ. ಒಂಟಿ**

4. ಅಕ್ಕನ 'ತನು ಕರಗದವ'ರಲ್ಲಿ
– **ಪ್ರೊ.ಜಿ.ಜಿ.ಹಿರೇಮಠ**

5. 'ಚಂದ್ರಗಿರಿಯ ತೀರದಲ್ಲಿ' ಕಾದಂಬರಿ–ಒಂದು ಅನುಸಂಧಾನ
– **ಶ್ರೀ ಚಂದ್ರಶೇಖರ ಹೆಗಡೆ**

6. ಕುವೆಂಪುರವರ ಕಥನ ಕವನಗಳ ಅವಲೋಕನ
– **ಡಾ.ಯಮನಪ್ಪ ಸಂ. ಹೊಸಮನಿ.**

7. ಕಂಪ್ಯೂಟರ್ ಯುಗ ಮತ್ತು ಸೃಜನಶೀಲತೆ
– **ಡಾ.ಮೋಹನ ಚಂದ್ರಗುತ್ತಿ**

8. ಹೊಸ ತಲೆಮಾರಿನ ಕಾವ್ಯಗಳಲ್ಲಿ ಪ್ರೀತಿ–ಪ್ರೇಮ–ಪ್ರಣಯ
– ಡಾ. ಶಿವಲಿಂಗಪ್ಪ ಆಯ್.ಭಂಡಾರಿ

9. ಬಳ್ಳಾರಿ ಜಿಲ್ಲೆಯ ಜನಪದ ಗೀತ ಸಂಪ್ರದಾಯಗಳು
–ಡಾ. ವ್ಹಿ.ಬಿ.ಸಣ್ಣಸಕ್ಕರಗೌಡರ

10. ಗ್ರಾಮೀಣ ಭಾಷಾ ಪ್ರಾದೇಶಿಕತೆ ಮತ್ತು ಸಮೂಹ ಮಾಧ್ಯಮಗಳು
– ಡಾ. ತಿಪ್ಪೇಸ್ವಾಮಿ ಡಿ.ಎಸ್

11. ಆತ್ಮಕಥೆಗಳಲ್ಲಿ ದಲಿತ ಸಂಘರ್ಷ
–ಡಾ. ಎಸ್.ಬಿ. ರಾಠೋಡ

12. ಕನಕದಾಸರ ಕೀರ್ತನೆಗಳಲ್ಲಿ ಭಕ್ತಿಯ ಸ್ವರೂಪ
– ಪ್ರೊ. ಮಲ್ಲಿಕಾರ್ಜುನ ಬೀರಣ್ಣಿ

13. ಕರ್ನಾಟಕ ಸಂಸ್ಕೃತಿ ಒಂದು ಹೆಮ್ಮೆ
– ಪ್ರೊ. ಡಿ. ಎಂ. ನಾಯ್ಕ

14. 'ಶೂದ್ರ ತಪಸ್ವಿ' ನಾಟಕದ ವಿವೇಚನೆ
– ಡಾ. ಮುರ್ತುಜಾ ಬ. ಒಂಟಿ

15. ಸತ್ಯ ಶೋಧಕ: ಎಂ. ಎಂ. ಕಲಬುರ್ಗಿ
– ಡಾ. ಪ್ರಕಾಶ ಎನ್. ನರಗುಂದ

16. ದಲಿತರು ಮತ್ತು ಭೂ ಹೋರಾಟಗಳು
– ಡಾ. ಎಚ್. ಕುಮಾರಸ್ವಾಮಿ ಹೆಗಡೆ

17. ಕಲೆಗಾಗಿ ಕಲೆ ಜನಪದರ ಜೀವನದ ಚಿತ್ರಕಲೆ
– ಡಾ. ತಿಪ್ಪೇಸ್ವಾಮಿ ಡಿ.ಎಸ್

18. ಪಾತ್ರೋಟರ ಸಾಧನೆ ಮತ್ತು ದಾರಿಗಳು
–ಸಿದ್ದಪ್ಪ ಮಾದರ(ಸಿತಿಮಾ ವಜ್ಜಲ)

19. ಭಕ್ತಿ ಪರಂಪರೆ ಮತ್ತು ಕನ್ನಡ ಕಾವ್ಯ
– ಡಾ. ಬಸವರಾಜ ಸಾಲವಾಡಗಿ

20. ಹಿಮಕಣಿವೆಯ ಅನುಭಾವಿ ಕವಿ ಲಲ್ಲೇಶ್ವರಿ : ಒಂದು ಚಿಂತನೆ
– ಪ್ರೊ. ಶ್ರೀಮತಿ.ಜಯಶೀಲ ಎಂ. ಎನ್

21. ಲಿಂಗಾಚಾರ
**– ಡಾ. ನಾಗರತ್ನಾ.ಅ.ಭಾವಿಕಟ್ಟಿ**

22. ನಿಜಗುಣಶಿವಯೋಗಿ
**– ನೆಲಾಗಣಿ ಮಹಾಂತೇಶ ಬಸಪ್ಪ**

23. ಮ್ಯಾಸಬೇಡರ ಸಂಸ್ಕೃತಿ (ಮೊಳಕಾಲ್ಮೂರು ತಾಲೂಕಿನ ಸಾಂಸ್ಕೃತಿಕ ಚಟುವಟಿಕೆಗಳು) **– ಸಣ್ಣ ಮಲ್ಲಯ್ಯ .ಬಿ**

24. ಬ್ಯಾಕೂಡ ಪಾಟೀಲ ಸಹೋದರರ ಚಳುವಳಿಗೆ ತತ್ತರಿಸಿದ ಬ್ರಿಟಿಷರು
**– ಸಂತೋಷ ಕೃ. ಮಾನೆ**

25. ಪುರಂದರದಾಸರು ಕಂಡ ಹೆಣ್ಣು
**– ಡಾ. ರೇಣುಕಾ. ಶಂ. ಹೆಬ್ಬಾಳ**

26. ಕನ್ನಡ ಹವ್ಯಾಸಿ ರಂಗಭೂಮಿ.
**– ಪ್ರೊ. ಶ್ರೀಮತಿ. ಟಿ. ಎಸ್. ಮಂಗಾಜೆ**

27. ದಲಿತ ಬಂಡಾಯ ಕಾವ್ಯಗಳಲ್ಲಿ ಮಾನವೀಯ ಪ್ರಜ್ಞೆ
**– ಡಾ. ಎಂ.ಆರ್. ದೊಡಮನಿ**

28. ಭಕ್ತಿಯ ಸಿರಿ–ಕಾಡಸಿದ್ಧೇಶ್ವರ ಮಠ ಸಿದ್ಧಗಿರಿ
**– ಪ್ರೊ.ರಾವಸಾಬ ಅ. ಬಡಿಗೇರ**

29. ಹುನಗುಂದ ತಾಲೂಕಿನ ಶಾಸನಗಳ ವೈವಿಧ್ಯತೆ : ಸಂರಕ್ಷಣೆ
**– ಪ್ರೊ. ಎಸ್.ಆರ್.ನಾಗಣ್ಣವರ**

30. ಆಧುನಿಕ ಕನ್ನಡ ಕವಯಿತ್ರಿಯರ ಅಭಿವ್ಯಕ್ತಿ ಕ್ರಮ
**– ಡಾ. ಶಿವಲಿಂಗಪ್ಪ ಆಯ್. ಭಂಡಾರಿ**

Title- Variety of Inscriptions in Hungund Taluk: Preservation

- Dr. S. R. Nagannavar

# ಹುನಗುಂದ ತಾಲೂಕಿನ ಶಾಸನಗಳ ವೈವಿಧ್ಯತೆ : ಸಂರಕ್ಷಣೆ

– ಪ್ರೊ. ಎಸ್.ಆರ್.ನಾಗಣ್ಣವರ

ಕರ್ನಾಟಕದ ಐತಿಹಾಸಿಕ ಚರಿತ್ರೆಗೆ ಹುನಗುಂದ ತಾಲೂಕಿನ ಕೊಡುಗೆ ಅಪಾರವಾದುದು, ಶಾಸನಗಳಲ್ಲಿ ಪೊನ್ನಗುಂದವೆಂದೇ ದಾಖಲಾಗಿದ್ದ ಹುನಗುಂದ ಶಾತವಾಹನರಿಂದ ಮೊದಲ್ಗೊಂಡು ವಿಜಯನಗರದ ಅರಸರ ಆಳ್ವಿಕೆಗೆ ಒಳಪಟ್ಟ ಪ್ರದೇಶವಾಗಿದೆ. ಅಲ್ಲದೇ ದೇಶದ ಮೇಲೆ ದಬ್ಬಾಳಿಕೆ ಮಾಡುತ್ತಿದ್ದ ಬ್ರಿಟಿಷರ ವಿರುದ್ಧ ತೊಡೆತಟ್ಟಿ ನಿಂತ ವೀರರಿಗೆ ಜನ್ಮನೀಡಿದ ವೀರಭೂಮಿಯಾಗಿದೆ. ಜಗಜ್ಯೋತಿ ಬಸವೇಶ್ವರರು ನಡೆದಾಡಿದ, ಮ.ನಿ.ಪ್ರ.ಮಹಾಂತಶಿವಯೋಗಿಗಳು ಹರಸಿದ, ಮ.ನಿ.ಪ್ರ.ಡಾ.ಮಹಾಂತಶ್ರೀಗಳು ಜೋಳಿಗೆಯನ್ನು ಹಿಡಿದುಕೊಂಡು ಜನರಲ್ಲಿರುವ ದುಶ್ಚಟಗಳನ್ನು ಜೋಳಿಗೆಗೆ ಹಾಕಿಸಿಕೊಂಡು ಜನರನ್ನು ಉದ್ಧರಿಸಿದ ಪುಣ್ಯಪುರುಷರು ಅವತರಿಸಿಹೋದ ಪುಣ್ಯಭೂಮಿ ಹುನಗುಂದ ತಾಲೂಕು. ಕಲೆ ವಾಸ್ತುಶಿಲ್ಪದ ಮೂಲಕ ಜಗತ್ತಿಗೆ ಪರಿಚಿತವಾದ ಐಹೊಳೆ ಇರುವ ತಾಲೂಕು ಇದಾಗಿದೆ. ಇಲಕಲ್‌ದ ಸೀರೆಯಿಂದ ದೇಶದ ಮಹಿಳೆಯರನ್ನು ತನ್ನತ್ತ ಕೈಬೀಸಿ ಕೈರೆಯುತ್ತಿರುವ ಕೈಗಾರಿಕೆಯ ಕೇಂದ್ರ ಈ ಹುನಗುಂದ ತಾಲೂಕು. ತಾಲೂಕಿನ ಚರಿತ್ರೆಯನ್ನು ಸಾರಿಹೇಳಲು ಹಲವಾರು ಮೂರ್ತ, ಅಮೂರ್ತ, ನೈಸರ್ಗಿಕ ಸ್ಮಾರಕಗಳಿಂದ ಶ್ರೀಮಂತಿಕೆಯನ್ನು ಪಡೆದುಕೊಂಡಿದೆ.

ಹುನಗುಂದ ಶಾಸನಗಳಲ್ಲಿ ಪೊನ್ನಗುಂದ ಎಂದು ದಾಖಲಾಗಿದೆ. ಪೊನ್ನ ಎಂದರೆ ಹೊನ್ನು ಅಥವಾ ಬಂಗಾರ, ಗುಂದ ಎಂದರೆ ಗುಡ್ಡ ಅಂದರೆ ಬಂಗಾರದ ಗುಡ್ಡ ಎಂಬ ಅರ್ಥ ಬರುವುದು. ಆದರೆ ಬಂಗಾರವಂತೂ ಇಲ್ಲ. ಆದರೆ ಇಂದಿಗೂ ಹುನಗುಂದದ ಸುತ್ತಲಿರುವ ಗುಡ್ಡದತ್ತ ನೋಡಿದರೆ ಅಬ್ರಕದ ಹಾಗೆ ಹೊಳೆಯುತ್ತಿರುವ ಹರಳುಗಳು ಕಂಡುಬರುತ್ತವೆ. ಆದುದರಿಂದ ಇದನ್ನು ಪೊನ್ನಗುಂದವೆಂದು ಕರೆದಿರಬಹುದು ಎಂಬುದು ತಜ್ಞರ ಅಭಿಪ್ರಾಯವಾಗಿದೆ.

**ಹುನಗುಂದ ತಾಲೂಕಿನ ಐತಿಹಾಸಿಕ ಸ್ಮಾರಕಗಳ ವೈವಿಧ್ಯತೆ ಮತ್ತು ಸಂರಕ್ಷಣೆ:**

ಗತ ಇತಿಹಾಸವನ್ನು ಸಾರಿಹೇಳುವ ಸ್ಮಾರಕಗಳನ್ನು ಮುಖ್ಯವಾಗಿ ಮೂರ್ತಸ್ಮಾರಕಗಳು, ಅಮೂರ್ತಸ್ಮಾರಕಗಳು ಮತ್ತು ನೈಸರ್ಗಿಕ ಸ್ಮಾರಕಗಳೆಂದು ಅಧ್ಯಯನದ ಅನುಕೂಲತೆಗಾಗಿ ವರ್ಗೀಕರಿಸಲಾಗಿದೆ. ಮೂರ್ತ ಸ್ಮಾರಕಗಳು ಎಂದರೆ ಸ್ಪರ್ಷಿಸಬಹುದಾದ ಹಾಗೂ ಕಣ್ಣಿಗೆ ಕಾಣಸಿಗುವ ಐತಿಹಾಸಿಕ ಸ್ಮಾರಕಗಳನ್ನು ಮೂರ್ತಸ್ಮಾರಕಗಳೆಂದು ಕರೆಯುತ್ತೇವೆ. ಉದಾ: ಶಾಸನಗಳು, ದೇವಾಲಯಗಳು, ಮಸೀದಿಗಳು, ಬಸಿದಿಗಳು, ಸ್ತೂಪಗಳು, ವಿಹಾರಗಳು, ಮತ್ತಿತರ ಪ್ರಾಚೀನ ಕಟ್ಟಡಗಳು, ಮನೆಯಲ್ಲಿರುವ ಬೀಸುವಕಲ್ಲು, ಒರಳು, ಒಳಕೆ ಇವೆಲ್ಲಾ ಮೂರ್ತ ಸ್ಮಾರಕಗಳು. ಸ್ಪರ್ಷಿಸಲು ಸಾಧ್ಯವಾಗದ, ನೋಡಲೂ ಆಗದ ಆದರೆ ಅನುಭವಿಸಲು ಸಾಧ್ಯವಾಗುವ ಸ್ಮಾರಕಗಳನ್ನು ಅಮೂರ್ತ ಸ್ಮಾರಕಗಳೆಂದು ಕರೆಯುತ್ತೇವೆ ಉದಾ: ಜಾನಪದ, ಹಬ್ಬಗಳು, ಜಾತ್ರೆಗಳು ಪ್ರಮುಖ ವಾದುವುಗಳಾಗಿವೆ. ಅರಣ್ಯ, ಬೆಟ್ಟ, ಗುಡ್ಡ, ಕೆರೆ, ಕಾಲುವೆ, ಮುಂತಾದವುಗಳನ್ನು ನೈಸರ್ಗಿಕ ಸ್ಮಾರಕಗಳೆಂದು ಕರೆಯುತ್ತೇವೆ. ಈ ಎಲ್ಲಾ ವಿವಿಧ ಸ್ಮಾರಕಗಳು ನಮ್ಮ ನಾಡಿನ ಸಾಂಸ್ಕೃತಿಕ ಪರಂಪರೆಯನ್ನು ಸಾರಿಹೇಳುವ ಮಹತ್ವದ ದಾಖಲೆಗಳಾಗಿವೆ. ಇಂತಹ ಸ್ಮಾರಕಗಳನ್ನು ಉಳಿಸಿ, ಬೆಳೆಸುವ ಬದಲು ಬದಲಾಗುತ್ತಿರುವ ಗಣಕೀಕೃತ ಜನಗತ್ತಿನ ಬರಾಟೆಯಲ್ಲಿ, ಮೌಢ್ಯತೆಗೆ ಮಾರುಹೋಗಿ ಚರಿತ್ರೆಯನ್ನು ಸಾರಿಹೇಳುವ ಸ್ಮಾರಕಗಳು ನಶಿಸುತ್ತಿರುವುದು ತುಂಬಾ ಖೇದಕರ ಸಂಗತಿಯಾಗಿದೆ. ಪ್ರಸ್ತುತ ಸಾದರಪಡಿಸುತ್ತಿರುವ ಸಂಶೋಧನಾ ಪ್ರಬಂಧವು ಹುನಗುಂದ ತಾಲೂಕಿನಲ್ಲಿ ದೊರೆಯಬಹುದಾದ ಅಮೂರ್ತಸ್ಮಾರಕವಾದ ಶಾಸನಗಳ ವೈವಿಧ್ಯತೆ ಮತ್ತು ಅವುಗಳನ್ನು ಸಂರಕ್ಷಣೆ ಕುರಿತು ವಿಷಯಕ್ಕೆ ಸೀಮಿತವಾಗಿಟ್ಟುಕೊಂಡ ರಚಿಸಲಾಗಿದೆ.

**ಶಾಸನಗಳು :**

ಶಾಸನ ಎಂದರೆ ಆಜ್ಞೆ ಅಥವಾ ಆದೇಶ ಎಂದರ್ಥವನ್ನು ನೀಡುವುದು ಹಿಂದಿನ ಕಾಲದ ಮಹಾನ್ ವ್ಯಕ್ತಿಗಳು, ಅರಸರು ಹೊರಡಿಸಿದ ಆದೇಶಗಳನ್ನು ಕಲ್ಲುಬಂಡೆಗಳ ಮೇಲೆ, ದೇವಾಲಯಗಳ ಗೋಡೆ, ಸ್ಥಂಭ, ತಾಮ್ರ ಅಥವಾ ಇತರ ಲೋಹಗಳ ಕಾಗದದ ಮೇಲೆ ಬರೆಯಲಾಗುತ್ತಿತ್ತು. ಹಾಗೆ ಬರೆಯಲ್ಪಟ್ಟ ದಾಖಲೆಗಳನ್ನು ಶಾಸನಗಳು ಎಂದು ಕರೆಯಬಹುದಾಗಿದೆ.

**ಶಾಸನಗಗಳ ವೈವಿಧ್ಯತೆ :**

ಶಾಸನಗಳನ್ನು ವಿಭಿನ್ನವಾಗಿ ರಚಿಸಿರುವುದು ನಮ್ಮ ಹಲವಾರು ಸಂಶೋಧನೆಗಳಿಂದ ತಿಳಿದುಬರುತ್ತದೆ. ಶಾಸನಗಳಲ್ಲಿ ವೀರಗಲ್ಲು ಶಾಸನಗಳು, ಸತಿಗಲ್ಲು ಶಾಸನಗಳು, ನಿಷೀಧಿಗಲ್ಲುಗಳು, ಗರುಡಗಲ್ಲು ಶಾಸನಗಳು ಎಂದು ವರ್ಗೀಕರಿಸಲಾಗಿದೆ, ಅಲ್ಲದೇ ಈ ಶಾಸನಗಳಲ್ಲಿ ಧರ್ಮ, ಸಮಾಜ, ರಾಜಕೀಯ, ದೇವಾಲಯಗಳ ನಿರ್ಮಾಣ, ಯಾರು ನಿರ್ಮಿಸಿದರು, ರಾಜರೋ, ರಾಣಿಯರೋ, ಯುವರಾಜರೋ, ಸಾಮಂತನೋ, ದಂಡನಾಯಕರೋ, ಅಧಿಕಾರಿಗಳೋ, ಸ್ತ್ರೀಯರೋ, ಸೂಳೆಯರೋ, ವ್ಯಾಪಾರಿ ಸಂಘದವರೋ, ಪಂಡಿತರೋ ಎಂಬುದನ್ನು ಸಾರಿಹೇಳುವ ದಾಖಲೆಗಳಾಗಿವೆ ಅದರಂತೆ, ಶಿಕ್ಷಣದ ಬೆಳವಣಿಗೆ, ಗುರುಗಳು, ಶಿಷ್ಯವೃಂದ, ವಿವಿಧ ಪಂತಗಳು, ಗುರುಗಳ ಪಾಂಡಿತ್ಯ, ಅವರು ನಿರ್ವಹಿಸುತ್ತಿರುವ ಕಾರ್ಯಗಳು, ನೀಡಿದ ದಾನಗಳು– ದಾನ ನೀಡಿದವರು ಯಾರು ? ಯಾವ ಉದ್ದೇಶ, ಯಾವ ಸಂದರ್ಭ, ಎಷ್ಟು ದಾನ, ನೀಡಿದ ದಾನ ಯಾವುದು? ಭೂಮಿಯೋ, ಹೊಲವೋ, ತೋಟವೋ, ಗದ್ದೆಯೋ, ಹಣವೋ, ತೆರಿಗೆ ಆದಾಯವೋ, ಮನೆಯೋ, ಮನೆಯ ನಿವೇಶನವೋ ಎಂಬುದರ ಮಾಹಿತಿ, ಅದರಂತೆ ಅರಸರ ರಾಜ್ಯವಿಸ್ತರಣೆಗಾಗಿ ಕೈಗೊಂಡ ಹೋರಾಟಗಳು, ಕೃಷಿ ಪ್ರಗತಿಗಾಗಿ ನಿರ್ಮಿಸಿದ ಕೆರೆ, ಕಾಲುವೆಗಳು, ಉತ್ಪಾದನೆಗೆ ಅನುಗುಣವಾಗಿ ನಿಗದಿಪಡಿಸಿದ ತೆರಿಗೆ, ತೆರಿಗೆ ನಿರಾಕರಿಸಿದರೆ ವಿಧಸಲಾಗುತ್ತಿದ್ದ ದಂಡ, ನ್ಯಾಯತೀರ್ಮಾಣದ ನೀತಿ ನಿಯಮಗಳು, ಚುಣಾವಣೆ ವ್ಯವಸ್ಥೆ, ಮಾಡಿದ ಸುಧಾರಣೆಗಳನ್ನು ತಿಳಿಸುವ ಮಹತ್ತಪೂರ್ಣವಾದ ಮಾಹಿತಿಗಳನ್ನು ಒಳಗೊಂಡಿರುತ್ತವೆ. ಇಂತಹ ಅಮೂಲ್ಯವಾದ ಮಾಹಿತಿಯನ್ನು ತಿಳಿಸುತ್ತಿರುವ

ಶಾಸನಗಳನ್ನು ಎಣ್ಣೆ, ಕುಂಕುಮ ಹಚ್ಚಿ ಹಾಳು ಮಾಡುತ್ತಿರುವುದಲ್ಲದೆ ಕೆಲವರು ಮನೆಗಳನ್ನು ನಿರ್ಮಿಸುವಾಗ ಒಡೆದು ಮನೆಗಳಿಗೆ ಹಾಕಿ ಕಟ್ಟಿರುವುದು, ಕೆರೆಗಳ ದಂಡೆಯ ಮೇಲೆ ಬಟ್ಟೆಗಳನ್ನು ತೊಳೆಯುವ ಕಲ್ಲುಗಳಾಗಿ ಮಾಡಿಕೊಂಡು ನಾಡಿನ ಇತಿಹಾಸವನ್ನೇ ತೊಳೆಯುತ್ತಿರುವಂತಾಗಿದೆ.

ಹುನಗುಂದ ತಾಲೂಕಿನ ಕೆಲವು ಆಯ್ದ ಶಾಸನಗಳು ತಿಳಿಸುವ ಮಾಹಿತಿಯನ್ನು ಈ ಪ್ರಬಂಧದ ಮೂಲಕ ನಾಡಿನ ಜನರಿಗೆ ತಿಳಿಸುವ ಪ್ರಯತ್ನವನ್ನು ಮಾಡಲಾಗಿದೆ.

**ಹುನಗುಂದದ ಉಲ್ಲೇಖವಿರುವ ಶಾಸನಗಳು :**

**ಆಡಳಿತ ಕೇಂದ್ರವಾಗಿ ಹುನಗುಂದ :**

ಹುನಗುಂದವನ್ನು ಶಾಸನಗಳಲ್ಲಿ ಮೂವತ್ತು ಬಾಡದ ರಾಜಧಾನಿ ಎಂದು ಉಲ್ಲೇಖಿಸಲಾಗಿದೆ. ಬಾದಾಮಿ ತಾಲೂಕಿನ ತೆಗಿ ಗ್ರಾಮದ ಮಾರುತಿ ದೇವಾಲಯದಲ್ಲಿ ನಿಲ್ಲಿಸಿರುವ ಕಲ್ಲಿನಲ್ಲಿ ಕ್ರಿ.ಶ.1147 ರಲ್ಲಿ ಬರೆಯಲಾದ ಶಾಸನವು ಹುನಗುಂದ ಸೀಮೆಯ ಆದಂಡಗೆ ಗ್ರಾಮದ ಕಾಟಿಗೌಡ ಎಂಬವನು ತಮ್ಮೂರಿನ ಕಲಿದೇವರಿಗೆ ಗಂಗಣವೆಯ ಕಾಲನ್ನು ತೊಳೆದು ದಾನ ನೀಡಿದ ಉಲ್ಲೇಖವಿದೆ.

ಶಿರೂರಿನ ಸಿದ್ದೇಶ್ವರ ದೇವಾಲಯದ ದಕ್ಷಿಣ ಗೋಡೆಯಲ್ಲಿ ಬರೆಯಲಾದ ಕ್ರಿ.ಶ.24ನೇ ಡಿಸೆಂಬರ್ 1049ಅವಧಿಯಲ್ಲಿ ಬರೆಯಿಸಲಾದ ಶಾಸನದಲ್ಲಿ ಕೊಲ್ಲಾಪೂರದ ಮಹಾಲಕ್ಷ್ಮೀಯ ಆರಾಧಕನಾದ ಪ್ರಭುರಾಜವರ್ಮನ ಮಗನಾದ ಮೂಕನ ಮಗಳಾದ ಗೌರಬ್ಬೆ. ಗೌರಬ್ಬೆಯ ಮಗನಾದ ಮಾರಸಿಂಘನು ಪೊನ್ನಗುಂದ–30 ರ ಮಧ್ಯದ ಶ್ರೀಪುರ ಎಂಬ ಗ್ರಾಮದಲ್ಲಿ 300 ನಿವರ್ತನ ಭೂಮಿಯನ್ನು ಸಿದ್ಧೇಶ್ವರ ಧೂಪ, ದೀಪ, ಗಂಧ, ನೈವೇದ್ಯ, ನೃತ್ಯೋಪಹಾರ, ಯತಿಗಳಿಗೆ, ವಿದ್ಯಾರ್ಥಿಗಳ ಸತ್ರಕ್ಕೆ ಜೀರ್ಣೋದ್ದಾರಕ್ಕೆ ದಾನ ನೀಡಿದ ಉಲ್ಲೇಖವಿದೆ. ಅಂದರೆ ಕಲ್ಯಾಣದ ಚಾಲುಕ್ಯರ ಕಾಲದಲ್ಲಿ ಹುನಗುಂದದ ಸೀಮೆಯ ವಿಸ್ತಾರ ಇಂದಿನ ಬಾಗಲಕೋಟೆ ತಾಲೂಕಿನಲ್ಲಿರುವ ಶಿರೂರಿನವರೆಗೂ ವ್ಯಾಪಿಸಿತ್ತು ಎಂಬುದು ತಿಳಿಯುವುದು.

**ಶಾಸನಗಳಲ್ಲಿ ಧಾರ್ಮಿಕ ಧೋರಣೆ :**

ಹುನಗುಂದದ ರಾಮಲಿಂಗೇಶ್ವರ ದೇವಾಲಯದ ಮಧ್ಯದ ಮುಚ್ಚಿಗೆಯಲ್ಲಿ ಸೇರಿಸಿದ ಕಲ್ಲಿನ ಮೇಲೆ ಕೆತ್ತಲಾಗಿರುವ ಕ್ರಿ.ಶ. 24ನೇ ಡಿಸೆಂಬರ್ 1074 ರ ಶಾಸನವು ಚಾಲುಕ್ಯ ಅರಸ ಭುವನೈಕ್ಯಮಲ್ಲನ (ಎರಡನೆಯ ಸೋಮೇಶ್ವರನ- 1068-1075) ರ ಕಾಲದ್ದಾಗಿದ್ದು, ಅದು ಜೈನ ಪರಂಪರೆಯನ್ನು ತೋರ್ಪಡಿಸುವ ಶಾಸನವಾಗಿದೆ. ಸು.34 ಸಾಲುಗಳಿಂದ ಕೂಡಿದ ಈ ಶಾಸನವು ಜೈನ ಸ್ತುತಿಯಾದ ಶ್ರೀಮಂತ್ಪರಮಗಂಭೀರ ಸ್ಯಾಧ್ವಾದಾಮೋಘಲಾಂಛನಂ ಜೀಯಾ ತ್ರೈಲೋಕ್ಯನಾಥಸ್ಯಶಾಸನಂ ಜೀನಶಾಸನಂ ಎಂಬುದರಿಂದ ಆರಂಭವಾಗಿದೆ. ಇದರಲ್ಲಿ ಪೊನ್ನಗುಂದವು 30ರ ಬಾಡದ ರಾಜಧಾನಿಯಾಗಿತ್ತು ಎಂಬ ಉಲ್ಲೇಖವಿದೆ. ಎರಡನೆಯ ಸೋಮೇಶ್ವರನ ಮಾಂಡಲೀಕನಾದ ಲಕ್ಷ್ಮರಸನು ಬೆಳ್ವೊಲ-30, ಪುಲಿಗೆರೆ-30ನ್ನು ಆಳುತ್ತಿರುವಾಗ ಪೊನ್ನಗುಂದದ ಅರಸನ ಬಸದಿಗೆ ಮೂಲಸಂಘದ ಸೂರಸ್ಥಗಣದ ಚಿತ್ರಕೂಟಾನ್ವಯದ ಕನಕನಂದಿಭಟಾರನ ಶಿಷ್ಯ ಉತ್ತರಸಿಂಗಭಟಾರಕ ಅವನ ಶಿಷ್ಯ ಬಾಷ್ಕರನಂದಿ ಪಂಡಿತ, ಅವನ ಸಧರ್ಮಿಯಾದ ಅರುಹಣನಂದಿಭಟಾರಕನ ಶಿಷ್ಯ ಆರ್ಯಪಂಡಿತರ ಕಾಲು ತೊಳೆದು ಶ್ರೀಕರಣದ ದೇವನಯ್ಯನಾಯಕ ಹೆಗ್ಗಡೆ ನಾಕಿಮಯ್ಯ, ರೇವಣಯ್ಯ ಪಸಾಯಿತ ಕಾಟಿಮಯ್ಯರ ಭಿನ್ನಹದಿಂದ 120 ಜನ ಮಹಾಜನರ ಸಮ್ಮುಖದಲ್ಲಿ 60 ಮತ್ತರು ಭೂಮಿಯನ್ನು ದಾನವಾಗಿ ನೀಡಿದನು ಎಂಬ ಉಲ್ಲೇಖವಿದೆ. [B.K.No.45 of 1928-29, SII.XI.I-113, ಕನ್ನಡ ವಿಶ್ವವಿದ್ಯಾಲಯ ಹಂಪಿ ಶಾಸನ ಸಂಪುಟ-9, ನಂ.94 ಪು-102-104] ಈ ರೀತಿಯಾದ ಜೈನ ಶಿಷ್ಯಪರಂಪರೆಯನ್ನು ತಿಳಿಸಿಹೇಳುವ ಶಾಸನವು ಇಂದು ಸುಣ್ಣ-ಬಣ್ಣಗಳಿಂದ ಕಾಣದಂತಾಗಿರುವುದು ಇತಿಹಾಸವನ್ನೇ ಮುಚ್ಚಿದಂತಾಗಿದೆ.

ಮತ್ತೊಂದು ಜೈನ ಶಾಸನವು ತಾಲೂಕಿನ ಮರೋಳದ ರಾಮಲಿಂಗ ದೇವಾಲಯದ ಬಲಗೋಡೆಯ ಕಲ್ಲಿನ ಮೇಲೆ ಬರೆಯಿಸಲಾಗಿದೆ. ಇದು ಕ್ರಿ.ಶ.24ನೇ ಡಿಸೆಂಬರ 1024 ಕ್ಕೆ ಸಮವಾಗಿದ್ದು, 61 ಸಾಲುಗಳಿಂದ ಕೂಡಿದೆ. ಈ ಶಾಸನದಲ್ಲಿ ಜೈನಮುನಿಯಾದ ಅನಂತವೀರ ಮುನಿಯ ಪಾಂಡಿತ್ಯವನ್ನು ವರ್ಣಿಸಲಾಗಿದೆ. ಅನಂತವೀರ್ಯಮುನಿಯು ವ್ಯಾಕರಣ, ನಿಘಂಟು, ಗಣಿತ, ವಾತ್ಸಾಯನ, ಜ್ಯೋತಿಷ್ಯ, ಶಕುನ, ಛಂದಸ್ಸು, ಮನುನೀತಿಶಾಸ್ತ್ರ, ಗಾಂಧಾರ, ಅಲಂಕಾರ, ಮಹಾಕಾವ್ಯ, ನಾಟಕ, ಅಧ್ಯಾತ್ಮಿಕ, ಅರ್ಥಶಾಸ್ತ್ರ ಸಿದ್ಧಾಂತ,

ಪ್ರಮಾಣಗಳು ಮುಂತಾದ ವಿಷಯಗಳ ಜ್ಞಾನ ಪಡೆದ ಈತನನ್ನು ಭೂಲೋಕದ ಸರ್ವಜ್ಞ ಎಂದು ಶಾಸನವು ಹೊಗಳಿದೆ. ಅಲ್ಲದೇ ಶಾಸನ ಆರಂಭದಲ್ಲಿಯೇ ಕಮಳದೇವ ಭಟಾರಕನ ಪಾಂಡಿತ್ಯ ವರ್ಣಿಸುತ್ತಾ ತ್ರಿಕಾಲಯೋಗ, ಸದ್ಗುಣಿ, ನಿಯಮ ಆಚಾರ ವಿಚಾರಸಾರ, ಗುಣಭಾರ, ಜ್ಞಾನ ನಿರ್ಣಯ, ನಿಯೋಗ ನಿರ್ಮಾಣ ಚಿತ್ರ ಎಂದು ಉಲ್ಲೇಖಿಸಲಾಗಿದೆ. ಈ ಶಾಸನದಲ್ಲಿ ಸಿದ್ಧಾಂತಭಟಾರಕ ದೇವಕೀರ್ತಿ ಪಂಡಿತರ ಹೆಸರು ಕೂಡಾ ಕಂಡುಬರುತ್ತದೆ. [B.K.No.60 of 1928-29, SII.XI.I-61, ಕನ್ನಡ ವಿಶ್ವವಿದ್ಯಾಲಯ ಹಂಪಿ ಶಾಸನ ಸಂಪುಟ-೯, ನಂ.99 ಪು-409-411] ಈ ಶಾಸನದಿಂದ ಒಬ್ಬ ವಿದ್ಯಾರ್ಥಿ ಅಥವಾ ಮಾನವ ಮನಸ್ಸನ್ನು ಹತೋಟಿಯಲ್ಲಿಟ್ಟುಕೊಂಡು ಏಕಾಗ್ರತೆಯಿಂದ ಅಧ್ಯಯನ ಮಾಡಿದರೆ ಎಂಥ ಕಠಿಣ ವಿಷಯವನ್ನಾದರೂ ಕರಗತ ಮಾಡಿಕೊಳ್ಳಲು ಸಾಧ್ಯವೆಂಬುದು ತಿಳಿಯುವುದು.

**ಸ್ತ್ರೀಪರ ಧೋರಣೆ :**

ಅಂದಿನ ಸಮಾಜದಲ್ಲಿ ಸ್ತ್ರೀಯರೂ ಉತ್ತಮವಾದ ಸ್ಥಾನವನ್ನು ಪಡೆಮುಕೊಂಡಿದ್ದರು ಎಂಬುದು ಶಾಸನಗಳಿಂದ ತಿಳಿದು ಬರುತ್ತದೆ. ಉದಾ: ಕಲ್ಯಾಣದ ಚಾಲುಕ್ಯರ ಕಾಲದ ಒಂದನೆಯ ಸೋಮೇಶ್ವರನ ಕಾಲದಲ್ಲಿ ಹೊರಡಿಸಲಾದ ಕ್ರಿ.13ನೇ ನವೆಂಬರ್ 1053 ರ ಶಾಸನವು ಹುನಗುಂದ ತಾಲೂಕಿನ ಅರಸಿಬೀದಿಯ ಶಾಸನದಲ್ಲಿ ಚಾಲುಕ್ಯ ಅರಸನಾದ ಜಯಸಿಂಹನ ಸಹೋದರಿ ಅಕ್ಕದೇವಿಯು ಸೂರ್ಯಗ್ರಹಣದಂದು ವಿಕ್ರಮಪುರಿಯ ನಂದಿಯಣ್ಣ ಷಡಂಗಿ ಭಟ್ಟೋಪಾಧ್ಯಾಯ ಮತ್ತು 42 ಜನ ಬ್ರಾಹ್ಮಣರಿಗೆ ಗ್ರಾಮದ ದಕ್ಷಿಣದಲ್ಲಿರುವ ತೋಟದ ಭಾಗವನ್ನು 70 ರ ಕೋಲನ್ನು ಬಳಸಿಕೊಂಡು 44 ಕಿಸುವಿನ ಭೂಮಿಯನ್ನು ಅಳೆದು 64 ಮತ್ತರನ್ನು ಬಿಟ್ಟಳು ಬಿಟ್ಟಳು ಎಂಬ ಮಾಹಿತಿಯು ಇದೆ. ಈ ದಾನವನ್ನು ಬಿಡುವ ಸಂದರ್ಭದಲ್ಲಿ ಅಕ್ಕಾದೇವಿ ಕಿಸುನಾಡು-70 ರಪ್ರದೇಶವನ್ನು ಆಳುತ್ತಿದ್ದಳು ಎಂಬುದು ತಿಳಿದು ಬರುವುದು. ಉದಾರವಾದಿಯಾದ ಅಕ್ಕಾದೇವಿಯನ್ನು ಶಾಸನದಲ್ಲಿ ದೀನರಿಗೆ ಚಿಂತಾಮಣಿ, ವಿವೇಕ ಚುಡಾಮಣಿ, ಗುಣದ ಬೆಡಂಗಿ ಎಂದು ವರ್ಣಿಸಿದೆ. [B.K.No.34 of 1928-29, SII.XI.I-88]

ಇದೇ ಗ್ರಾಮದ ಸೂಳೆಗುಡಿ ಅಥವಾ ಜೈನ ಬಸದಿಯಲ್ಲಿರುವ ಕಲ್ಲುತುಂಡಿನ ಮೇಲೆ ಬರೆಯಲಾದ 29.03.1047 ರ ಕಾಲಕ್ಕೆ ಸಂಬಂಧಿಸಿದ ಶಾಸನದಲ್ಲಿ ಜೀನಾಲಯದ ಪರಿಚಾರಕರಿಗೆ ದಾನ ನೀಡಿದ ಕುರಿತು ಈ ರೀತಿಯಾಗಿ ಬರೆಯಲಾಗಿದೆ. ಜೀನಾಲಯದ ಜೀರ್ಣೋದ್ಧಾರಕ್ಕಾಗಿ ಸುಣ್ಣ-ಬಣ್ಣ ಹಾಕಲು, ಗಂಧ, ಧೂಪ, ದೀಪಕ್ಕೆ, ಕಪ್ಪಡಕ್ಕೆ ಸೂರ್ಯಗ್ರಹಣದಂದು ಕಿಸುನಾಡು-70 ರ ಬಳಿಯ ಗಾಣದ ಹೋಳೂರು ಗ್ರಾಮವನ್ನು ದತ್ತಿಯಾಗಿ ನೀಡಿದಳು ಅದರಂತೆ ದಡಿಗರಸನಿಂದ ಕೊಂಡುಕೊಂಡು 50 ಮತ್ತರು ಭೂಮಿಯನ್ನು ದೇವರಿಗೆ ನೀಡಿದಳು, ಮತ್ತು ವಿಕ್ರಮಪುರದ ಈಶಾನ್ಯ ದಿಕ್ಕಿನಲ್ಲಿ ಒಂದು ಮತ್ತರು ತೋಟ, ಉತ್ತರಕ್ಕೆ ಒಂದು ಮತ್ತರು ನಾಗದೇವ ಪಂಡಿತನಿಗೆ, ಹನ್ನೆರಡು ಮತ್ತರನ್ನು ಪರೆಕಾರ ಕೇತೋಜನಿಗೆ, ಇಪ್ಪತ್ನಾಲ್ಕು ಮತ್ತರು ದಕ್ಷಿಣಕ್ಕೆ, ಉತ್ತರಕ್ಕೆ ಒಂದು ಮತ್ತರು ಭೂಮಿಯನ್ನು ನೀಡಿದರೆ ಕಲ್ಕುಟಿಕ ಸರೋಜನಿಗೆ ಹನ್ನೆರಡು ಮತ್ತರು ಹೊಲ, ಒಂದು ಮತ್ತರು ತೋಟ ಕೊಟ್ಟ ದಾಖಲೆಗಳಿವೆ.

**ದಾನದ ಉದ್ಧೇಶ :**

ಯಾವುದೇ ದಾನವನ್ನು ನೀಡಬೇಕಾದರೂ ಒಂದು ನಿರ್ಧಿಷ್ಟವಾದ ಉದ್ದೇಶವನ್ನು ಇಟ್ಟುಕೊಂಡು ನೀಡುವುದು ಸಂಪ್ರದಾಯ ಅಂತೆಯೇ ಶಾಸನಗಳಲ್ಲಿ ವಿವಿಧ ಉದ್ಧೇಶಗಳಿಗಾಗಿ ದಾನ-ದತ್ತಿಗಳನ್ನು ನೀಡುತ್ತಿದ್ದರೆಂಬುದು ಶಾಸನಗಳಿಂದ ತಿಳಿಯುವುದು. ಉದಾ: ತನಗೆ ಪುಣ್ಯ ದೊರೆಯಲಿ, ಸಂತಾನಪ್ರಾಪ್ತಿಯಾಗಲಿ, ತಂದೆ-ತಾಯಿಗಳಿಗೆ ಒಳಿತಾಗಲಿ ಎಂಬ ಉಲ್ಲೇಖಗಳಿವೆ. ಉದಾ: ಹುನಗುಂದ ತಾಲೂಕಿ ಹನುಮಂತ ದೇವಾಲಯದ ಎದುರಿಗಿರುವ ಕ್ರಿ.ಶ. 09ನೇ ಸೆಪ್ಟೆಂಬರ್ 1553 ರ ಶಾಸನದಲ್ಲಿ ವಿಜಯನಗರದ ಅರಸನಾದ ಸದಾಶಿವರಾಯನ ರಾಜಪ್ರತಿನಿಧಿ ಅಳಿಯ ರಾಮರಾಯನು ನಾವಿಂದರಾದ ತಿಮ್ಮೋಜ, ಭದ್ರೋಜರ ಮತ್ತು ಕೊಂಡೋಜರ ಮನವಿಯ ಮೇರೆಗೆ ತನಗೆ ಪುಣ್ಯ ದೊರೆಯಲಿ ಎಂಬ ಉದ್ದೇಶದಿಂದ ಮುದಗಲ್ ಸೀಮೆಯ ಕರಡಾಯ ಸಮಿತಿಗೆ ಸೇರಿದ ನಾವಿಂದರ ಮೇಲೆ ಹಾಕಲಾದ ಸಮಸ್ತ ತೆರಿಗೆಯನ್ನು ತೆಗೆದು ಹಾಕಿದ ವಿವರವಿದೆ.
[B.K.No.169 of 1926-27, SII.XV-261]

**ಶಾಸನದಲ್ಲಿ ವಿಷಯ ವೈವಿಧ್ಯತೆ:**

ನಂದವಾಡಗಿಯ ಶಿವಾಲಯದ ಮುಂಭಾಗದಲ್ಲಿರುವ ಕಂಬದ ಮೇಲಿನ ಕ್ರಿ.ಶ.11ನೇ ಶತಮಾನದ ಶಾಸನವು ಕಲ್ಯಾಣದ ಚಾಲುಕ್ಯ ಅರಸ ತ್ರೈಲೋಕ್ಯಮಲ್ಲ [ಒಂದನೆಯ ಸೋಮೇಶ್ವರ] ನ ಕಾಲದ್ದಾಗಿದ್ದು, ಇದರಲ್ಲಿ ಧರ್ಮ ಸಮನ್ವಯತೆ, ಜನಪರ ಧೋರಣೆ, ಕೃಷಿ, ಶಿಕ್ಷಣ ಕ್ಷೇತ್ರಗಳ ಪ್ರಗತಿಗೆ ಅರಸನು ಶ್ರಮಿಸುತ್ತಿದ್ದನೆಂಬುದನ್ನು ಉಲ್ಲೇಖಿಸಲಾಗಿದೆ. ಶಾಸನದ ಆರಂಭವು ಜೈನ ಸ್ತುತಿಯೊಂದಿಗೆ ಆಗಿದ್ದು; ಶೂರನಾಗಿದ್ದ ತ್ರೈಲೋಕ್ಯಮಲ್ಲನು ಮಾಳವ, ಪಲ್ಲವ, ಪಾಂಡ್ಯ, ಮಗದ, ಗೂರ್ಜರರನ್ನು ಜಯಿಸಿದರೆ ಈತನ ಮಹಾಮಂಡಳೇಶ್ವರ ಛಾನಗಂಧವಾರನು ಕಲ್ಯಾಣ ನಗರದಲ್ಲಿ ತುಂಬೇಶ್ವರ ದೇವಾಲಯ, ಮಠ, ದೀಪಮಾಲೆ, ಕಂಬ ನಿರ್ಮಿಸಿದ್ದನಲ್ಲದೆ ರಾಜಧಾನಿಯಾದ ಅಣ್ಣಿಗೇರಿಯಲ್ಲಿ ತ್ರೈಪುರುಷ ದೇವರ ಸಾಲೆ, ಭೋಗಾದಿತ್ಯನ ಆಲಯ, ಮುಳುಗುಂದದಲ್ಲಿ ಶ್ರೀಪಾಳೇಶ್ವರ ಮಠ, ಕೊಳ್ಳುಗೆಯಲ್ಲಿ ಶಿವಾಲಯವನ್ನು ದಿಕ್ಪಾಲಕರ ಸಹಿತ ನಿರ್ಮಿಸಿದನು, ನಂದಾಪುರದಲ್ಲಿ ಕೇತೇಶ್ವರನನ್ನು, ಮಂಡಲಗೇರಿಯಲ್ಲಿ ಶಂಭುನಾರಾಯಣ ದೇವಾಲಯ, ಬೆಳ್ಗಲ್ಲಿಯ ಕಪಿಲತೀರ್ಥದಲ್ಲಿ ಕೇತೇಶ್ವರನನ್ನು ನಿರ್ಮಿಸಿ, ನವಿಲೆಯಲ್ಲಿ ಸಂಕರ ದೇವಾಲಯ, ನಂದವಾಡಗಿಯಲ್ಲಿ ನಾಗಲೇಶ್ವನನ್ನು, ಮಠವನ್ನು ಪೆರೂರಲ್ಲಿ ಕೇತೇಶ್ವರವನ್ನು ಕಟ್ಟಿಸಿದನು. ಹೀಗೆ ಶೈವ ವೈಷ್ಣವ ಧರ್ಮಗಳನ್ನು ಬೆಳೆಸುವುದರೊಂದಿಗೆ ಜೈನಧರ್ಮವನ್ನು ತಿರಸ್ಕಾರದಿಂದ ಕಾಣದೇ ಪೊನ್ನಗುಂದದ ತ್ರಿಭುವನತಿಲಕ ಬಸದಿಯನ್ನು, ಪುರಗುರದಲ್ಲಿ ವೀರಜೇನಾಲಯ, ಕುಂದರಗಿಯಲ್ಲಿ ಜೈನ ಮಂದಿರ ಜೀರ್ಣೋದ್ಧಾರ ಮಾಡಿಸಿ ಈ ಧರ್ಮವನ್ನು ಬೆಳೆಸಲು ಶ್ರಮಿಸಿದನು.

ಕೃಷಿಕರ ಮಿತ್ರನಾಗಿದ್ದು ಹಲವಾರು ಕೆರೆಗಳನ್ನು ನಿರ್ಮಿಸಿದ ದಾಖಲೆ ಈ ಶಾಸನದಲ್ಲಿ ಉಲ್ಲೇಖಿತವಾಗಿದೆ. ರಾಜಧಾನಿ ಅಣ್ಣಿಗೇರಿಯಲ್ಲಿ ಪೆರ್ಮಾಡಿ ಬಸದಿಪುರದಲ್ಲಿ ಕೇರಿ ಮತ್ತು ದೊಡ್ಡದಾದ ಕೆರೆಯೊಂದನ್ನು ಅದರಂತೆ ಮುಳಗುಂದದಲ್ಲಿ ಕೊಳವನ್ನು ಕಟ್ಟಿಸಿದ ದಾಖಲೆಯಿದೆ.

ಶಿಕ್ಷಣದ ಪ್ರಗತಿಗಾಗಿ ಶ್ರಮಿಸಿದ ಈ ಮಂಡಳೇಶ್ವರನು ತನ್ನ ನಾಡಿನ ಪ್ರಜೆಗಳ ಮಕ್ಕಳಿಗೆ ಶಿಕ್ಷಣ ದೊರೆಯಲಿ ಎಂಬ ಉದ್ದೇಶದಿಂದ ಕೋಟಾಳ್ಳಿಯಲ್ಲಿ

ದಾನವಿನೋಧ ತ್ರೈಪುರುಷ ದೇವರ ಸಾಲೆಯನ್ನು ಮತ್ತು ಅಣ್ಣಿಗೇರಿಯಲ್ಲಿಯೂ ಚೋಳಗೊಂಡ ತ್ರೈಪುರುಷ ದೇವರ ಸಾಲೆಯನ್ನು ನಿರ್ಮಿಸಿದನು. ಉದಾರವಾದಿಯಾದ ಭಾವನಗಂಧವಾರನು ಹಲವಾರು ದಾನ-ಧರ್ಮಾಧಿಕಾರ್ಯಗಳನ್ನು ನಿರ್ವಹಿಸುತ್ತಿದ್ದನು. ಸಂಗಮದ ಸಂಗಮೇಶ್ವರ ದೇವರಿಗೆ 100 ಮತ್ತರು ಭೂಮಿ ಮಾರೋಜನಿಗೆ 50 ಮತ್ತರು, ಇಬ್ಬರು ಪಾತ್ರದವರಿಗೆ 48 ಮತ್ತರು, ರಂಗಭೋಗದ ನಾಲ್ವರು ಸೂಳೆಯರಿಗೆ 76 ಮತ್ತರು, ಮಾಲೆಗಾರರಿಗೆ 13 ಮತ್ತರು, ದಂಡೀಶ್ವರನಿಗೆ 12 ಮತ್ತರು ಭೂಮಿಯನ್ನು ದಾನ ಮಾಡಿದ ಉಲ್ಲೇಖವಿದೆ. ಈ ಶಾಸನದಿಂದ ಒಂದು ದೇವಾಲಯದ ಸೇವೆಗಾಗಿ ಯಾವ ಯಾವ ಪರಿಚಾರಕರು ಇದ್ದರು ಅವರಿಗೆ ದೊರೆಯಬಹುದಾದ ಸೌಲಭ್ಯಗಳು ಎಂಥವು ಎಂಬುದು ಸ್ಪಷ್ಟವಾಗಿ ತಿಳಿಯಬಹುದಾಗಿದೆ. ಈ ಶಾಸನವು ಒಟ್ಟು ಮೂರು ಮುಖಗಳನ್ನು ಹೊಂದಿದ್ದು ಮೊದಲನೆಯ ಮುಖದಲ್ಲಿ 22 ಸಾಲುಗಳು, ಎರಡನೆಯ ಮುಖದಲ್ಲಿ 52 ಸಾಲುಗಳು, ಮೂರನೆಯ ಮುಖದಲ್ಲಿ 23 ಸಾಲುಗಳಲ್ಲಿ ಈ ಶಾಸನವನ್ನು ಕೊರೆಯಲಾಗಿದೆ. ಕೊನೆಯಲ್ಲಿ ಈ ಶಾಸನವನ್ನು ಅಳಿದವರು ಕುರುಕ್ಷೇತ್ರ, ವಾರಣಾಸಿಯಲ್ಲಿ 3ಕೋಟಿ ಆಕಳುಗಳನ್ನು ಮತ್ತು ಬ್ರಾಹ್ಮಣರನ್ನು ಕೊಂದ ಪಾಪ ಬರುವುದು ಎಂದು ತಿಳಿಸಲಾಗಿದೆ. [B.K.No.171 of 1926-27, SII.X-I 103, ಕನ್ನಡ ವಿಶ್ವವಿದ್ಯಾಲಯ ಹಂಪಿ ಶಾಸನ ಸಂಪುಟ–9]

ಒಂದು ದೇವಾಲಯವನ್ನು ಸಂರಕ್ಷಣೆ ಮಾಡಿದರೆ ಅದರಿಂದ ನಾಡಿನ ಆರ್ಥಿಕತೆಯನ್ನು ಹೆಚ್ಚಿಸಬಹುದು, ನಿರುದ್ಯೋಗಿಗಳಿಗೆ ವಿಭಿನ್ನ ರೀತಿಯ ಉದ್ಯೋಗಗಳನ್ನು ಒದಗಿಸಿಕೊಡಲು ಸಾಧ್ಯವೆಂಬುದನ್ನು ಈ ಶಾಸನದ ಪರಿಚಯದೊಂದಿಗೆ ನಾಡಿನ ಜನತೆಗೆ ತಿಳುವಳಿಕೆಯನ್ನು ಮೂಡಿಸಲು ಸಾಧ್ಯವೆಂದರೆ ತಪ್ಪಾಗಲಾರದು.

*****

ತೂಕದ ನೆಲೆ

"ತೂಕದನೆಲೆ" ಡಾ. ಶಿವಲಿಂಗಪ್ಪ ಭಂಡಾರಿ ಹಾಗೂ ಡಾ. ತಿಪ್ಪೇಸ್ವಾಮಿ ಡಿ.ಎಸ್. ಅವರ ವಿಶಿಷ್ಟ ಹಾಗೂ ವಿಭಿನ್ನವಾದ ಸಂಪಾದನ ಕೃತಿಯಾಗಿದೆ. ಪ್ರಸ್ತುತ ಸಂದರ್ಭದಲ್ಲಿ ಸಾಹಿತ್ಯ ವಲಯದಲ್ಲಿ ಹಿರಿಯ ಸಾಹಿತಿಗಳ ಬರಹವನ್ನು ಸಂಗ್ರಹಿಸಿ, ವ್ಯವಸ್ಥಿತವಾಗಿ ಜೋಡಿಸಿ ಸಂಪಾದಿಸುವ ಹಾಗೂ ಅದನ್ನು ಕೃತಿರೂಪದಲ್ಲಿ ಹೊರತರುವ ಸುಲಭ ವಿಧಾನ ಸದ್ಯ ಸಾಹಿತ್ಯ ವಲಯದಲ್ಲಿ ಚಾಲ್ತಿಯಲ್ಲಿದೆ. ಇದೆ ನೆಲೆಯ ಇನ್ನೊಂದು ಹೊಸವಿಧಾನವೆಂದರೆ ಪ್ರಮುಖ ಬರಹಗಾರರಿಂದ ನಿರ್ದಿಷ್ಟ ವಿಷಯದ ಮೇಲೆ ಲೇಖನ ಬರೆಯಿಸಿ, ಲೇಖನಗಳನ್ನು ಒಂದೆಡೆ ಸಂಕಲನಗೊಳಿಸಿ ಕೃತಿರೂಪದಲ್ಲಿ ಹೊರತರುವ ಹೊಸ ಎರಡನೆಯ ವಿಧಾನ. ಈ ವಿಧಾನಕ್ಕೆ ಹೊಂದಿಕೊಂಡು ಕೃತಿ ಸಂಪಾದನ ಕಾರ್ಯಕ್ಕೆ ಕೈಹಾಕಿ ಯಶಸ್ವಿಯಾದವರೆ ಆತ್ಮೀಯ ಸ್ನೇಹಿತರಾದ ಡಾ. ಶಿವಲಿಂಗಪ್ಪ ಭಂಡಾರಿ ಹಾಗೂ ಡಾ. ತಿಪ್ಪೇಸ್ವಾಮಿ.ಡಿ.ಎಸ್.ಅವರು. ಪ್ರಸ್ತುತ ಇವರು ಹಲವು ಕನ್ನಡ ಪ್ರಾಧ್ಯಾಪಕ ಕಾಯಕವನ್ನು ನಿಷ್ಠೆಯಿಂದ ಮಾಡುತ್ತ ಇತ್ತ ಸಾಹಿತ್ಯ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡು, ವಿಚಾರದೊಂದು ಹೊಸಹೊಳವಿನ ವಿಚಾರವನ್ನು ಹೊರಹಾಕಿ ಮುನ್ನಡೆಯುವ ಕಾಯಮಾಡಿದವರು. ತೂಕದ ನೆಲೆಯ ಬರಹವನ್ನು ಸಂಪಾದಿಸಿ ನಾಡಿಗೆ ಪರಿಚಯಿಸ ಹೊರಟು ಅರ್ಥಪೂರ್ಣಕಾರ್ಯ ಮಾಡಿದವರು. ಉದಯೋನ್ಮುಖ ಬರಹಗಾರರಿಗೆ ಬರಹದ ನೆಲೆಗಳೆಂದೆ ಹಂಬಲ ಇತ್ತ ಸಂಪಾದಕರಿಗೆ ಇದೆ. ಹಾಗೆ ಹಿರಿಯ ತಲೆಮಾರಿನ ಬರಹಗಾರರಿಗೂ ಸಮಾನ ಗೌರವ ನೀಡಿರುವುದು ಕಂಡು ಬರುತ್ತದೆ. ಸಮನ್ವಯದ ಹಾದಿಯಲ್ಲಿ ನಡೆದು, ಸುವ್ಯವಸ್ಥಿತವಾಗಿ ಹಿರಿ ಲೇಖನಗಳನ್ನು ಹೊಂದಿಸಿದ ಲೇಖನಗಳ ಸಂಗಮವೆ "ತೂಕದನೆಲೆ" ಹೆಸರಿನ ಗ್ರಂಥ. ಇದು ಬೆಂಗಳೂರಿನ ಎಸ್.ಎಲ್.ಎನ್.ಪಬ್ಲಿಕೇಷನ್‌ದಿಂದ ಬೆಳಕುಕಂಡಿದೆ. ೩೨೦ ಪುಟಗಳ ವಿಸ್ತಾರದಲ್ಲಿ ಅರಳಿದ ಸುಂದರ ಕಲಾಕುಸುಮ. ಇಂತಹ ಹಲವಾರು ಕೃತಿಗಳು ಇತ್ತ ಸ್ನೇಹಿತರಿಂದ ಮುಂದೆಯೂ ಹೊರಬರಲೆಂದು ಹಾರೈಸುತ್ತೇನೆ.

■ ಡಾ.ಪ್ರಿ.ಬಿ.ಮಲ್ಲಿಕಾರ್ಜುನಗೌಡ

ರೂ. ೮೦/-